

ಕಟ್ಟುಪಾಡುಗಳಿಂದ ಮುಕ್ತನಾಗಿದ್ದೇನೆ ಎಂದು ಭಾಸವಾಗುತ್ತಿದೆ. ಎಷ್ಟೋ ಧ್ವನಿಗಳನ್ನು ಕೇಳಿಸಿಕೊಳ್ಳಲು ಸಾಧ್ಯವಾಗುತ್ತಿದೆ. ಹದಿನೈದು ವರ್ಷಗಳ ಹಿಂದೆ ನಾನು ತಾಂತ್ರಿಕವಾಗಿ ಹೆಚ್ಚು ಚೆನ್ನಾಗಿ ಮತ್ತು ಸಂಕೀರ್ಣವಾಗಿ ಹಾಡುತ್ತಿದ್ದಿರಬಹುದು. ಆದರೆ ನನ್ನನ್ನು ನಿಜವಾಗಿ ಕಾಡುವುದು ಆಗಿನ ನನ್ನ ಧ್ವನಿ. ಎಷ್ಟೋ ಜನ “ಕೃಷ್ಣ, ದಯವಿಟ್ಟು ನೀವು ಹಿಂದೆ ಹಾಡುತ್ತಿದ್ದಂತೆಯೇ ಹಾಡಿ” ಎನ್ನುತ್ತಾರೆ. ಆದರೆ ಇಂದು ಆ ಕೃಷ್ಣ ಇಲ್ಲ. ನನಗದು ಸಂತೋಷ ತಂದಿದೆ. ಈಗ ನಾನು ಜೀವಂತವಾಗಿದ್ದೇನೆ. ಹಲವು ವೈರುಧ್ಯಗಳ ಜೊತೆ ಸೆಣಸಾಡುತ್ತಿರುವುದರಿಂದ ಈ ಜೀವಂತಿಕೆ ಸಾಧ್ಯವಾಗಿದೆ. ಹಲವು ರೀತಿಯ ನಂಬಿಕೆಗಳು ಒಟ್ಟೊಟ್ಟಿಗೆ ಇರುವುದಕ್ಕೆ ಸಾಧ್ಯವಾಗಬೇಕು. ಆಗಲೇ ಸಮಾನತೆ, ಜಾತ್ಯತೀತತೆ ಸಾಧ್ಯ. ಕಲೆ, ಸಂಸ್ಕೃತಿ ನಮ್ಮನ್ನು ಪ್ರಶ್ನೆಗೆ ಹಚ್ಚಬೇಕು. ಚಿಂತನೆಗೆ ಹಚ್ಚಬೇಕು. ಭಿನ್ನಾಭಿಪ್ರಾಯಗಳನ್ನು ಗೌರವಿಸುತ್ತಾ, ವಿಭಿನ್ನ ಧ್ವನಿಗಳನ್ನು ಸಮಾನ ನೆಲೆಯಲ್ಲಿ ಕೇಳಿಸಿಕೊಂಡು ಗೌರವಿಸುವುದರಲ್ಲೇ ಪ್ರಜಾಸತ್ತೆಯ ಪ್ರಾಣ ಇರುವುದು.”

ಕಲಾ ಸಂಗೀತವೆನ್ನುವುದು ಅಮೂರ್ತ; ಅದು ಅರ್ಥಕ್ಕೆ ಅಂಟಿಕೊಂಡಿಲ್ಲ ಎನ್ನುತ್ತಿದ್ದ ಕೃಷ್ಣ ಅವರಿಗೆ ಈ ಚಿಂತನೆಯಲ್ಲಿದ್ದ ಸಮಸ್ಯೆ ನಿಧಾನವಾಗಿ ಅರಿವಿಗೆ ಬಂದಿತು.

“ನಾವು ಇಡೀ ಪ್ರಪಂಚವನ್ನು ಅರ್ಥಗಳ ಮೂಲಕವೇ ಗ್ರಹಿಸಿಕೊಳ್ಳುತ್ತಿದ್ದೇವೆ. ಹಾಗಾಗಿ ಏಕಾಏಕಿ ಅರ್ಥ ಬೇಕಾಗಿಲ್ಲ, ಅದು ಮುಖ್ಯವಲ್ಲ ಎನ್ನುವ ಚಿಂತನೆಯನ್ನು ಒಪ್ಪಿಕೊಳ್ಳುವುದು ಎಲ್ಲರಿಗೂ ತುಂಬಾ ಕಷ್ಟ. ಹಾಗಾಗಿ ಮತ್ತೆ ಸಂಗೀತದಲ್ಲಿ ಸ್ವಲ್ಪ ಮಟ್ಟಿಗೆ ಮಾತು ಮತ್ತು ಅರ್ಥದತ್ತ ಹೊರಳಬೇಕಾಯಿತು.”

ಆದರೆ ಅಲ್ಲಿಯೂ ಅವರು ತುಳಿದ ದಾರಿ ಸಾಕಷ್ಟು ಬೇರೆಯಾಗಿತ್ತು. ಅಲ್ಲಿ ಅವರು ತಂದ ಮಾತು ಮತ್ತು ಅರ್ಥಗಳು ಪರಿಸರ